ಗೊರೆಯತೊಡಗುವ ಮೇಲ್ವಿಚಾರಕರನ್ನು ಎಬ್ಬಿಸುವುದು ಪುಟಗಟ್ಟಲೆ ಬರೆಯುವ ಮಕ್ಕಳು ಹೆಚ್ಚುವರಿ ಹಾಳೆಗಳಿಗಾಗಿ.

ಕೆಲವು ಮೇಲ್ವಿಚಾರಕರು ತಮ್ಮ ಜೊತೆಗೆ ಮೊಬೈಲುಗಳನ್ನು ತಂದುಕೊಂಡು ವಾಟ್ಸ್‌ಆ್ಯಪ್, ಫೇಸ್‌ಬುಕ್ಕು, ಆ ಮೇಲು, ಈ ಮೇಲು ಎಂದು ತಮ್ಮ ತಲೆಯನ್ನು ದೊಡ್ಡ ಕುರಿಯಂತೆ ತಗ್ಗಿಸಿ, ಆಗಾಗ ತಮ್ಮೊಳಗೇ ನಗುತ್ತಾ, ಕೈಗಳಿಗೆ ಅವಿರತವಾದ ಕೆಲಸವನ್ನು ಕೊಡುತ್ತಾ ಪ್ರಪಂಚವನ್ನು ಮರೆತು ಮಕ್ಕಳಿಗಿಂತ ಹೆಚ್ಚು ತಲ್ಲೀನರಾಗಿರುತ್ತಾರೆ. ಕಿರು ಪರೀಕ್ಷೆಗಳಿಗೆ ತಮ್ಮ ಜೊತೆ ಪುಸ್ತಕಗಳನ್ನೋ, ದಿನ ಪತ್ರಿಕೆಗಳನ್ನೋ ಒಯ್ದು ಓದುವ ರೂಢಿಯಿರುವ ಮೇಲ್ವಿಚಾರಕರ ಅವಸ್ಥೆ ಮಾತ್ರ ವಾರ್ಷಿಕ ಪರೀಕ್ಷೆಯ ಅವಧಿಯಲ್ಲಿ ಚಿಂತಾಜನಕವಾಗಿರುತ್ತದೆ. ಅದರಲ್ಲಿ ಪಬ್ಲಿಕ್ ಪರೀಕ್ಷೆಯಾದರಂತೂ ಮುಗಿದೇ ಹೋಯಿತು. ಸಾಕ್ಷಾತ್ ನರಕದಲ್ಲಿಯೇ ಇರುವುದೇನೋ ಎಂಬಂತೆ ಚಡಪಡಿಸುತ್ತಿರುತ್ತಾರೆ ಅವರು. ಅಂತಹವರು ಕೊಠಡಿಯಲ್ಲಿ ಮೇಲ್ವಿಚಾರಣೆ ಮಾಡುವುದಕ್ಕಿಂತಲೂ ನರಸಿಂಹನಂತೆ ಕೊಠಡಿಯ ಒಳಗೂ ಅಲ್ಲದೇ, ಹೊರಗೂ ಅಲ್ಲದೇ ಹೊಸ್ತಿಲಿನ ಮೇಲೆ ನಿಂತುಕೊಂಡು ಜಿರಾಫೆಯಂತೆ ಕತ್ತನ್ನು ಎಷ್ಟು ಸಾಧ್ಯವೋ ಅಷ್ಟುದ್ದ ಮಾಡಿ ಕಾಲೇಜಿನ ಪಡಸಾಲೆಗಳಲ್ಲಿ ಜರುಗುವ ಆಗುಹೋಗುಗಳ ಅವಲೋಕನ ಮಾಡುತ್ತಿರುತ್ತಾರೆ. ಜೋರಾಗಿ ಮಾತನಾಡಲಾಗದಿದ್ದರೂ ನೆರೆಹೊರೆಯ, ತಮ್ಮದೇ ನೆರಳಚ್ಚಿನಂತಿರುವ ಇತರ ನರಸಿಂಹರ ಜೊತೆಗೆ ಮೂಕರ ಭಾಷೆಯಲ್ಲಿ ಸಂಭಾಷಿಸುತ್ತಿರುತ್ತಾರೆ. ಇಂತಹ ಮೇಲ್ವಿಚಾರಕರೆಂದರೆ ವಿದ್ಯಾರ್ಥಿಗಳಿಗೆ ಬಲು ಪ್ರೀತಿ. ಅವರನ್ನು ಕಂಡೊಡನೆ ಸಣ್ಣಗೆ ಹರ್ಷೋದ್ಗಾರ ಮಾಡುವುದು ಕೊಠಡಿಯೆಲ್ಲಾ ಪ್ರತಿಧ್ವನಿಸುತ್ತದೆ. ಇನ್ನು ಬಲು ಜೋರಿರುವ ಮೇಲ್ವಿಚಾರಕರೇನಾದರೂ ಬಂದರೆಂದರೆ 'ಛೇ... ಛೇsss... ಅಯ್ಯೋsss!' ಎಂಬ ಕರುಣಾಜನಕ ಉದ್ಗಾರಗಳು ಅವರ ಕೊರಳಿನಿಂದ ಹೊಮ್ಮುತ್ತವೆ.

ನಾನು ಈ ಎಲ್ಲದರಿಂದ ದೂರ. ನನ್ನ ಬಳಿ ಇನ್ನೂ ಸ್ಮಾರ್ಟ್‌ಫೋನು ಬಂದಿಲ್ಲ. ಹಾಗಾಗಿ ಅದರ ಗೀಳಿನಿಂದ ನಾನು ವಂಚಿತನಾಗಿದ್ದೇನೆ. ಇನ್ನು ಓದುವ ಹುಚ್ಚು ಬಲವಾಗಿದೆಯಾದರೂ ಮೂರು ಗಂಟೆಯಲ್ಲಿ ನಾನು ಓದುವುದು ಪರೀಕ್ಷೆಯ ಕೊಠಡಿಯಲ್ಲಿ ನೆರೆದ ಹಲವಾರು ಮಕ್ಕಳ ಚರ್ಯೆಗಳನ್ನು. ಹೀಗಾಗಿಯೇ ಎಂದೂ ನನಗೆ ಮೇಲ್ವಿಚಾರಣೆಯೆನ್ನುವುದು ಹೊರೆಯೆಂದು ಅನ್ನಿಸಿಲ್ಲ. ಕುರ್ಚಿಯನ್ನು ಎಲ್ಲೇ ಇಟ್ಟಿದ್ದರೂ ನಾನದನ್ನು ಎಲ್ಲರ ಮೋರೆ ಕಾಣುವಂತೆ ಸೂಕ್ತವಾದ ಸ್ಥಳದಲ್ಲಿಟ್ಟುಕೊಂಡು, ಓಡಾಡಿ ಸುಸ್ತಾದಾಗ ಆಸೀನನಾಗುತ್ತೇನೆ ಮತ್ತು ವಿದ್ಯಾರ್ಥಿಗಳ ಚರ್ಯೆಯನ್ನು, ಅವರ ಹಾವಭಾವವನ್ನು ಅಭ್ಯಸಿಸುತ್ತೇನೆ.

ಹಲವಾರು ಮಂದಿ ವಿದ್ಯಾರ್ಥಿಗಳು ಮಂತ್ರವನ್ನು ಮಂದಸ್ವರದಲ್ಲಿ ಮಣಗುಟ್ಟುವಂತೆ ತುಟಿಗಳನ್ನು ಆಡಿಸುತ್ತಾ ಮನದ ಪರದೆಯ ಮೇಲೆ ಮೂರನೇ ಆಯಾಮದಲ್ಲಿ ಉತ್ತರಗಳನ್ನು ಕಂಡುಕೊಳ್ಳುತ್ತಾ ಇರುತ್ತಾರೆ. ದೇವಸ್ಥಾನದೆದುರು ಮಾತ್ರ ಚಪ್ಪಲಿಯನ್ನು ಬಿಟ್ಟು ಗೊತ್ತಿರುವ ಜನ ಪರೀಕ್ಷೆಯ ಕೊಠಡಿಯಲ್ಲಿ ತಮ್ಮ ತಮ್ಮ ಪಾದುಕೆಗಳನ್ನು ಬಿಟ್ಟು ಥೇಟ್ ಸರಸ್ವತಿಯನ್ನು ಆರಾಧಿಸುವವರಂತೆ ಉತ್ತರ ಪತ್ರಿಕೆಯಲ್ಲಿ ನೋಟ ನೆಟ್ಟಿರುತ್ತಾರೆ. ಇಷ್ಟು ದಿನ ನೆನಪಾಗದಿದ್ದ ದೇವಸ್ಥಾನ, ಮಸೀದಿ, ಚರ್ಚುಗಳಿಗೆಲ್ಲಾ ಭೇಟಿಯಿತ್ತು, ಗುರುತಿಗಾಗಿ ಉದ್ದುದ್ದನೆಯ ನಾಮವನ್ನೋ, ತಾಯಿತವನ್ನೋ, ಬಣ್ಣದ ಹಲವಾರು ದಾರಗಳನ್ನೋ ಮುಂಗೈಗೆ ಹಾವಿನಂತೆ ಸುತ್ತಿಕೊಂಡಿರುತ್ತಾರೆ. ಕೆಲವರ ಕೈಗಳಲ್ಲಿ ಹೆಂಗಸರ ಕೈಗಳನ್ನು ಒಂದಾನೊಂದು ಕಾಲದಲ್ಲಿ ಬಳೆಗಳು ಅಲಂಕರಿಸಿರುತ್ತಿದ್ದ ಹಾಗೆ ಫ್ರೆಂಡ್‌ಶಿಪ್ ಬ್ಯಾಂಡ್‌ಗಳೋ, ರಾಖಿಯೋ, ಕರಿಯ ಬಣ್ಣದ ಬಳುಕುವ